**<u>ದಿನಾಂಕಃ 05-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ .

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.P.S.H ವಕೀಲರಿಂದಃ</u>**

1. ಹೊನ್ನಾಳಿ ತಾಲೂಕಿನ ಬಸವನಹಳ್ಳಿ ನನ್ನ ಊರಾಗಿರುತ್ತದೆ. ಮೃತ ಶಾಂತಪ್ಪ ಸೊರಟೂರಿನವನಾಗಿರುತ್ತಾನೆ. ನಾನು ಕೂಲಿ ಕೆಲಸ ಮಾಡುತ್ತೇನೆ. ಮೃತ ಶಾಂತಪ್ಪ ನನಗೆ ತುಂಬಾ ಬೇಕಾದವನು ಎಂದರೆ ಸರಿಯಲ್ಲ. ದಿಃ 12-12-2020 ರಲ್ಲಿ ಮೃತ ಶಾಂತಪ್ಪನಿಗೆ ಅಪಘಾತ ಆಗಿರುತ್ತದೆ. ಮೃತ ಶಾಂತಪ್ಪನ ಸಂಬಂಧಿಕರು ಅವರನ್ನು ಆಸ್ಪತ್ರೆಗೆ ಸೇರಿಸಿದ್ದರು. ಆಸ್ಪತ್ರೆಯಲ್ಲಿ ಅವರನ್ನು ನೋಡಿಕೊಳ್ಳಲು ನಂತರ ನನ್ನನ್ನು ಕರೆದುಕೊಂಡು ಹೋಗಿದ್ದರು. ನನಗೆ ತಿಂಗಳಿಗೆ ರೂ.15 ಸಾವಿರ ಸಂಬಳ ಕೊಡುತ್ತೇನೆ ಎಂದು ಮಾತುಕತೆ ಆಗಿತ್ತು. ರೂ.15 ಸಾವಿರ ನನಗೆ ಪಾವತಿ ಮಾಡಿದ ಬಗ್ಗೆ ಯಾವುದೆ ದಾಖಲೆ ಇರುವುದಿಲ್ಲ. ಆಸ್ಪತ್ರೆಯವರು ನನಗೆ ಗಾಯಾಳುವನ್ನು ನೋಡಿಕೊಳ್ಳುವ ಬಗ್ಗೆ ಕಾರ್ಡ ಕೊಟ್ಟಿದ್ದರು ಅದನ್ನು ನಾನು ಭಾಗ್ಯಮ್ಮ ಅವರ ಕೈಯಲ್ಲಿ ಕೊಟ್ಟಿರುತ್ತೇನೆ. ಶಾಂತಪ್ಪ ತೀರಿಕೊಂಡ ನಂತರ ನಾನು ಆಸ್ಪತ್ರೆಯವರು ನೀಡಿದ ಕಾರ್ಡನ್ನು ಭಾಗ್ಯಮ್ಮಳಿಗೆ ಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿ ಹಾಜರು ಪಡಿಸುವುದಿದೆ ಎಂದು ನಾನು ಆ ಕಾರ್ಡನ್ನು ಕೇಳಿರುವುದಿಲ್ಲ. ನನ್ನನ್ನು ಶಾಂತಪ್ಪನವರ ಆರೈಕೆಗಾಗಿ ನೇಮಿಸಿಕೊಂಡಿದ್ದೇ ಇಲ್ಲ ಎಂದರೆ ಸರಿಯಲ್ಲ.

2. ನನಗೆ ರೂ.15 ಸಾವಿರ ರೂಪಾಯಿಗಳನ್ನು ಭಾಗ್ಯಮ್ಮ ಕೊಡುತ್ತಿದ್ದರು. ನನಗೆ ಸಂಬಳವನ್ನು 2-3 ತಿಂಗಳಿಗೊಮ್ಮೆ ಕೊಡುತ್ತಿದ್ದರು. ಅವರಿಗೆ ಕಷ್ಟ ಇದ್ದುದ್ದರಿಂದ ಪ್ರತಿತಿಂಗಳು ಸಂಬಳ ಕೊಡಿ ಎಂದು ಕೇಳಿರಲಿಲ್ಲ. ನನಗೂ ಸಹ ಮನೆಯಲ್ಲಿ ಕಷ್ಟ ಇತ್ತು ಹಣದ ಅವಶ್ಯಕತೆ ಇತ್ತು ಆದರೆ ಪ್ರತಿತಿಂಗಳು ಸಂಬಳ ಕೊಡಿ ಎಂದು ನಾನು ಕೇಳಿರಲಿಲ್ಲ. ಮ್ಯಾಕ್ಸ ಆಸ್ಪತ್ರೆಯಲ್ಲಿ 20 ದಿನ ನಾನು ಅವರನ್ನು ನೋಡಿಕೊಳ್ಳಲು ಇದ್ದೆನು. ಶಾಂತಪ್ಪ ಸಾಯುವರೆಗೂ ನಾನು ಅವರನ್ನು ನೋಡಿಕೊಳ್ಳುತ್ತಾ ಇದ್ದೆನು. ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಯಲ್ಲಿ 2 ತಿಂಗಳು ಶಾಂತಪ್ಪ ಒಳರೋಗಿಯಾಗಿದ್ದರು ಅಲ್ಲೂ ಸಹ ನಾನು ಅವರನ್ನು ನೋಡಿಕೊಳ್ಳಲು ಇದ್ದೆನು. ನಂತರ ಶಾಂತಪ್ಪ ರವರನ್ನು ಮಾನಸಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಅವರನ್ನು ಒಂದು ವಾರ

ನಾನು ನೋಡಿಕೊಂಡಿರುತ್ತೇನೆ . ನಂತರ ಶಾಂತಪ್ಪ ಅವರನ್ನು ಬೆಂಗಳೂರಿನ ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಒಂದು ತಿಂಗಳು ನಾನು ಶಾಂತಪ್ಪ ಅವರನ್ನು ನೋಡಿಕೊಂಡಿರುತ್ತೇನೆ. ನಾನು ಸದರಿ ಆಸ್ಪತ್ರೆಗಳಲ್ಲಿ ಶಾಂತಪ್ಪ ರವರ ಆರೈಕೆ ಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಂತಪ್ಪ ಪ್ರಜ್ಞಾಹೀನ ಸ್ಥಿತಿಯಲ್ಲಿ ಮಲಗಿಕೊಂಡೆ ಇರುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮ್ಯಾಕ್ಸ ಆಸ್ಪತ್ರೆಯಲ್ಲಿ ಡಾ. ನಾರಾಯಣ ಪಣಜಿ ಮತ್ತು ಡಾ. ಅರುಣ ರವರು ಶಾಂತಪ್ಪ ಗುಣಮುಖವಾಗುವ ಸಾಧ್ಯತೆ ಕಡಿಮೆ ಎಂದು ಹೇಳಿದ್ದರು. ಯಾವುದೆ ವೈದ್ಯರು ನನ್ನ ಬಳಿ ಆ ರೀತಿ ಹೇಳಿಲ್ಲ ನಾನೆ ಕಟ್ಟುಕತೆ ಮಾಡಿ ಹೇಳಿದ್ದೇನೆ ಎಂದರೆ ಸರಿಯಲ್ಲ.

3. ದಿಃ 22-02-2024 ರಂದು ಬೆಳಗಿನ ಜಾವ 4.30 ಸುಮಾರಿಗೆ ಮನೆಯಲ್ಲಿ ಶಾಂತಪ್ಪ ತೀರಿಕೊಂಡಿರುತ್ತಾರೆ ಆ ಸಮಯದಲ್ಲಿ ನಾನು , ಭಾಗ್ಯಮ್ಮ ಮತ್ತು ಮಕ್ಕಳು ಇದ್ದೆವು. ಪೋಲಿಸ್ ಠಾಣೆಗೆ ನಾನು ಮತ್ತು ಭಾಗ್ಯಮ್ಮ ಹೋಗಿದ್ದೆವು. ಶವಪಂಚನಾಮೆಗೆ ನಾನು ಸಹಿ ಹಾಕಿರುವುದಿಲ್ಲ. ನಾನು ಯಾವತ್ತೂ ಶಾಂತಪ್ಪನ ಆರೈಕೆ ಮಾಡಿಯೇ ಇರಲಿಲ್ಲ ಹಣದ ಆಸೆಗಾಗಿ ಅರ್ಜಿದಾರರಿಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.